ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www. jsscwkgl.org

ಕೊಳ್ಳೇಗಾಲ: 18.3.2026 ರಂದು ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ ಯೂತ್ ರೆಡ್‌ಕ್ರಾಸ್ ಘಟಕದ ವತಿಯಿಂದ **"ವಿಶ್ವ ಆರೋಗ್ಯ ದಿನದ ಪ್ರಯುಕ್ತ"** ಆರೋಗ್ಯ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಚಾಮರಾಜನಗರದ ಯೂತ್‌ರೆಡ್ ಕ್ರಾಸ್ ಸೊಸೈಟಿಯ ಉಪಾಧ್ಯಕ್ಷರಾದ ಡಾ.ಮಹೇಶ್ ಎಂ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ 1859ರಲ್ಲಿ ಯುರೋಪ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಇಟಲಿಯ ನಡುವಿನ ಯುದ್ಧದ ಸಮಯದಲ್ಲಿ ಈ ರೆಡ್‌ಕ್ರಾಸ್ ಎಂಬುದು ಆರಂಭವಾಯಿತು ನಂತರದ ದಿನಗಳಲ್ಲಿ ಜಿನೀವಾ ಸಮಾವೇಶದ ಮೂಲಕ ಜಾಗತಿಕ ಮಟ್ಟದಲ್ಲಿ ರೆಡ್ ಕ್ರಾಸ್ ಘಟಕ ವಿಸ್ತಾರವಾಯಿತು. ಹೆನ್ರಿಡ್ಯುನಾಂಟ್ ಎಂಬ ವ್ಯಕ್ತಿಯಿಂದ ಈ ರೆಡ್‌ಕ್ರಾಸ್ ಘಟಕ ಸ್ಥಾಪನೆಯಾಯಿತು. ನೊಬೆಲ್ ಪ್ರಶಸ್ತಿ ಪಡೆದ ಪ್ರಪಂಚದಲ್ಲಿ ಮೊದಲಿಗೆ ಎಂಬ ಖ್ಯಾತಿಗೆ ಪಾತ್ರರಾದರು. ಇಂದು ಪ್ರಪಂಚದಾದ್ಯಂತ 97 ದೇಶಗಳಲ್ಲಿ ಸುಮಾರು 17 ಮಿಲಿಯನ್ ಸದಸ್ಯರೊಂದಿಗೆ ರೆಡ್‌ಕ್ರಾಸ್ ಘಟಕ ಅಸ್ತಿತ್ವದಲ್ಲಿದೆ ಎಂದು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಮತ್ತೋರ್ವ ಸಂಪನ್ಮೂಲ ವ್ಯಕಿಗಳಾದ ಡಾ.ಶ್ವೇತ ಶಶಿಧರ್ ಅವರು ಮಾತನಾಡಿ **"ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು"** ಎಂದು ಹೇಳಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ರಕ್ತಸ್ರಾವದ ಸಂದರ್ಭದಲ್ಲಿ ಫಿಡ್ಸ್, ಹಾವು ಕಡಿತ ಹೀಗೆ ಅನೇಕ ತುರ್ತುಪರಿಸ್ಥಿತಿಗಳ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆ ನೀಡುವುದರ ಬಗ್ಗೆ ಪ್ರಯೋಗಿಕವಾಗಿ ತಿಳಿಸಿಕೊಟ್ಟರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ.ಹೆಚ್.ಎಸ್.ಕೊಂಗಳಪ್ಪ ನವರು ಮಾತನಾಡುತ್ತಾ 1920ರಲ್ಲಿ ಭಾರತದಲ್ಲಿ ಯೂತ್‌ರೆಡ್ ಕ್ರಾಸ್ ಘಟಕ ಸ್ಥಾಪನೆಯಾಯಿತು. ನಂತರ ಕರ್ನಾಟಕದಲ್ಲಿ 1921ರಲ್ಲಿ ಸ್ಥಾಪನೆಯಾಗಿ ರಾಜ್ಯಪಾಲರು ಇದರ ಅಧ್ಯಕ್ಷರಾಗಿರುತ್ತಾರೆ. ಈ ಘಟಕದ ಉದ್ದೇಶ ಸೇವಾ ಮನೋಭಾವನೆ ಆರೋಗ್ಯ ರಕ್ಷಣೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ ಹಾಗೂ ಯೂತ್ ರೆಡ್‌ಕ್ರಾಸ್ ಘಟಕದ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮರವರು ಉಪಸ್ಥಿತರಿದ್ದರು.



ಚಾಮರಾಜನಗರದ ಯೂತ್‌ರೆಡ್ ಕ್ರಾಸ್ ಸೊಸೈಟಿಯ ಉಪಾಧ್ಯಕ್ಷರಾದ ಡಾ.ಮಹೇಶ್ ಎಂ ರವರು ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ ಪ್ರಾಂಶುಪಾಲರಾದ ಡಾ.ಹೆಚ್.ಎಸ್.ಕೊಂಗಳಪ್ಪರವರು, ಡಾ.ಶ್ವೇತ ಶಶಿಧರ್ ಹಾಗೂ ಯೂತ್ ರೆಡ್‌ಕ್ರಾಸ್ ಘಟಕದ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮರವರು ರವರನ್ನು ಕಾಣಬಹುದು




ಡಾ.ಮಹೇಶ್ ಎಂ ರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ ಪ್ರಾಂಶುಪಾಲರಾದ ಡಾ.ಹೆಚ್.ಎಸ್.ಕೊಂಗಳಪ್ಪರವರು, ಡಾ.ಶ್ವೇತ ಶಶಿಧರ್ ಹಾಗೂ ಯೂತ್ ರೆಡ್‌ಕ್ರಾಸ್ ಘಟಕದ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮರವರು ರವರನ್ನು ಕಾಣಬಹುದು




ಡಾ.ಶ್ವೇತ ಶಶಿಧರ್ ಮಾತನಾಡುತ್ತಿರುವುದು. ಚಿತ್ರದಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್ ಮಮತ, ಡಾ.ಮಹೇಶ್ ಎಂ, ಪ್ರಾಂಶುಪಾಲರಾದ ಡಾ.ಹೆಚ್.ಎಸ್.ಕೊಂಗಳಪ್ಪರವರು ಹಾಗೂ ಯೂತ್ ರೆಡ್‌ಕ್ರಾಸ್ ಘಟಕದ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮರವರು ರವರನ್ನು ಕಾಣಬಹುದು